ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 21/10/2020

# ಸೋಂಕು ಮುಗಿದಿಲ್ಲ

## ದೇಶವನ್ನು ಉದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ 7ನೇ ಬಾರಿ ಭಾಷಣ

## ಯಾವುದೇ ಕಾರಣಕ್ಕೂ ಹಬ್ಬದ ವೇಳೆ ಮೈಮರೆಯಬೇಡಿ ಎಂದು ಮನವಿ

**ನವದೆಹಲಿ:** ಸದ್ಯ ಅಂತ್ಯವಾಗಿರುವುದು ಲಾಕ್‌ಡೌನ್‌ಗಷ್ಟೇ, ಕೊರೊನಾಗಲ್ಲ... ಯಾವುದೇ ಕಾರಣಕ್ಕೂ ದೇಶದ ಜನ ಹಬ್ಬದ ವೇಳೆ ಮೈಮರೆಯಬಾರದು...



ಇದು ಪ್ರಧಾನಿ ನರೇಂದ್ರ ಮೋದಿ ಅವರ ಕಳಕಳಿಯ ಮನವಿ. ಈಗಾಗಲೇ ನವರಾತ್ರಿ ಸಂಭ್ರಮ ಆರಂಭವಾಗಿದ್ದು, ಇದು ಕಳೆದ ನಂತರ ಹಿಂದೆಯೇ ದೀಪಾವಳಿ ಹಬ್ಬವೂ ಬರಲಿದೆ. ಈ ಹಿನ್ನೆಲೆಯಲ್ಲಿ ಮೋದಿ , ಮಂಗಳವಾರ ದೇಶವನ್ನು ಉದ್ದೇಶಿಸಿ ಭಾಷಣ ಮಾಡಿದರು.

**ಮಾಸ್ಕ್ ಬಿಡಬೇಡಿ:** 12 ನಿಮಿಷಗಳ ಭಾಷಣದಲ್ಲಿ ಜನತೆ ವಹಿಸಬೇಕಾದ ಮುಂಜಾಗ್ರತೆ ಬಗ್ಗೆಯೇ ಮಾತನಾಡಿದ ಮೋದಿ ಅವರು, ಯಾವುದೇ ಕಾರಣಕ್ಕೂ ಮಾಸ್ಕ್ ಧರಿಸದೇ ಮನೆಯಿಂದ ಆಚೆ ಕಾಲಿಡಲೇಬೇಡಿ ಎಂದು ಮನವಿ ಮಾಡಿಕೊಂಡರು. ನಾವು ಲಾಕ್‌ಡೌನ್‌ನಷ್ಟೇ ಅಂತ್ಯ ಮಾಡಿದ್ದೇವೆ. ಆದರೆ, ವೈರಸ್ ತಾಂಡವವಾಡುತ್ತಿದೆ. ನಾವು ಕೊರಾನಾ ಗೆದ್ದು ಬಿಟ್ಟಿದ್ದೇವೆ ಎಂದು ಭಾವಿಸಿ ಮೈಮರೆಯಬೇಡಿ. ಸಾಮಾಜಿಕ ಅಂತರ ಪಾಲಿಸಿ, ಎಲ್ಲಾ ನಿಯಮಾವಳಿ ಅನುಸರಿಸಿ ಎಂದರು.



### ಮೋದಿ ಹೇಳಿದ್ದೇನು?

1. ಈ ಹಬ್ಬದ ಋತುವಿನಲ್ಲಿ ಮಾರುಕಟ್ಟೆ ಚೇತರಿಸಿಕೊಳ್ಳುತ್ತಿದೆ. ಇದು ಒಳ್ಳೆಯ ಬೆಳವಣಿಗೆ. ಆದರೆ, ಲಾಕ್‌ಡೌನ್ ಮುಗಿದಿದೆ, ವೈರಸ್ ಮಾತ್ರ ಇನ್ನೂ ಹೋಗಿಲ್ಲ.
2. ಕಳೆದ ಏಳೆಂಟು ತಿಂಗಳಿಂದ ಪ್ರತಿಯೊಬ್ಬ ಭಾರತೀಯನೂ ಕೊರೊನಾ ಓಡಿಸಲು ಶ್ರಮ ಹಾಕಿದ್ದಾನೆ. ಈಗ ಈ ಶ್ರಮ ವ್ಯರ್ಥವಾಗಲು ಬಿಡಬಾರದು.
3. ಇತ್ತೀಚಿನ ದಿನಗಳಲ್ಲಿ ಜನ ಜಾಗರೂಕತೆ ಮರೆತಿದ್ದಾರೆ. ಇದು ಸರಿಯಲ್ಲ. ನೀವು ಮಾಸ್ಕ್ ಧರಿಸದೇ ಆಚೆ ಹೋದರೆ, ನಿಮ್ಮ ಕುಟುಂಬವನ್ನೇ ಅಪಾಯಕ್ಕೆ ಈಡು ಮಾಡಿದಂತೆ.
4. ನೆನಪಿರಲಿ, ಅಮೆರಿಕ ಅಥವಾ ಯುರೋಪ್ ದೇಶಗಳಲ್ಲಿ ಕೊರೊನಾ ಈಗಾಗಲೇ ಕಡಿಮೆಯಾಗಿತ್ತು. ಆದರೆ, ಅಲ್ಲಿನ ಜನ ಮೈಮರೆತಿದ್ದರಿಂದ ಮತ್ತೆ ಏರಿಕೆಯಾಗಿದೆ.
5. ಭಾರತದಲ್ಲಿ ಪ್ರತಿ 10 ಲಕ್ಷ ಜನಸಂಖ್ಯೆಗೆ 5,500 ಮಂದಿ ಕೊರೊನಾ ಸೋಂಕಿತರಾಗಿದ್ದಾರೆ. ಅಮೆರಿಕ, ಬ್ರೆಜಿಲ್‌ನಲ್ಲಿ ಇಷ್ಟೇ ಜನಸಂಖ್ಯೆಗೆ 25 ಸಾವಿರ ಸೋಂಕಿತರಾಗಿದ್ದಾರೆ.
6. ಲಸಿಕೆ ಸಿಕ್ಕ ತಕ್ಷಣ ಪ್ರತಿಯೊಬ್ಬ ನಾಗರಿಕನಿಗೂ ಕೊರೊನಾ ಲಸಿಕೆ ಸಿಗುವಂತೆ ಮಾಡಲು ಕೇಂದ್ರ ಸರ್ಕಾರ ಶ್ರಮಿಸುತ್ತಿದೆ.
7. ಈ ಹಬ್ಬದ ಋತುವಿನಲ್ಲಿ ಪ್ರತಿಯೊಬ್ಬ ಕುಟುಂಬವೂ ಸುರಕ್ಷತೆ ಮತ್ತು ಖುಷಿಯಾಗಿರಲಿ ಎಂದು ಆಶಿಸುತ್ತೇನೆ.

## ಸೋಂಕು ಗಣನೀಯ ಇಳಿಕೆ

**24 ಗಂಟೆಯಲ್ಲಿ 46,790 ಮಂದಿಗೆ ಸೋಂಕು ದೃಢ**

**ಯಾವಾಗ ಎಷ್ಟು?**

| ದಿನ | ಸಂಖ್ಯೆ |
|---|---|
| ಆ.11 | 70 ಲಕ್ಷ |
| ಸೆ.28 | 60 ಲಕ್ಷ |
| ಸೆ.16 | 50 ಲಕ್ಷ |
| ಸೆ.1 | 40 ಲಕ್ಷ |
| ಆ.23 | 30 ಲಕ್ಷ |
| ಆ.7 | 20 ಲಕ್ಷ |

**ದೇ**ಶದಲ್ಲಿ ಇದೇ ಮೊದಲ ಬಾರಿಗೆ ಕೊರೊನಾ ಸೋಂಕಿನ ಸಂಖ್ಯೆ 50 ಸಾವಿರಕ್ಕಿಂತ ಕಡಿಮೆ ದೃಢಪಟ್ಟಿವೆ. ಬರೋಬ್ಬರಿ 4 ತಿಂಗಳ ಬಳಿಕ ಸೋಂಕಿತರ ಸಂಖ್ಯೆ 46,790ರಷ್ಟು ದೃಢಪಟ್ಟಿದೆ. ಜತೆಗೆ 587 ಮಂದಿ ಅಸುನೀಗಿದ್ದಾರೆ. ಸೋಮವಾರ ಬೆಳಗ್ಗೆ 8 ಗಂಟೆಯಿಂದ ಮಂಗಳವಾರ ಬೆ.8 ಗಂಟೆ ಮಾಹಿತಿ ಇದಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಸೆಪ್ಟೆಂಬರ್ ಮಧ್ಯಭಾಗದಲ್ಲಿಯೇ ಸೋಂಕು ಗರಿಷ್ಠಪ್ರಮಾಣಕ್ಕೇರಿ ಸದ್ಯ ಇಳಿಕೆಯ ಹಾದಿಯಲ್ಲಿದೆ ಎಂದು ಹೇಳಿದ ಬೆನ್ನಲ್ಲೇ ಸರ್ಕಾರದಿಂದ ನಾಲ್ಕು ತಿಂಗಳ ಕನಿಷ್ಠದ ಮಾಹಿತಿ ಪ್ರಕಟವಾಗಿದೆ. ಸತತ 2ನೇದಿನ ಕೂಡ 600ಕ್ಕಿಂತ ಕಡಿಮೆ ಸಾವು ದಾಖಲಾಗಿದೆ.

**ಆರು ರಾಜ್ಯ; ಶೇ.64:** ಕರ್ನಾಟಕ, ಮಹಾರಾಷ್ಟ್ರ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಪ.ಬಂಗಾಳದಲ್ಲಿ ಶೇ.64 ರಷ್ಟು ಸೋಂಕು ಪ್ರಕರಣಗಳಿವೆ ಎಂದು ಆರೋಗ್ಯ ಇಲಾಖೆ ಕಾರ್ಯದರ್ಶಿ ರಾಜೇಶ್ ಭೂಷಣ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

▶ 5ನೇ ಪುಟಕ್ಕೆ

**ಎಲ್ಲೆಲ್ಲಿ 2ನೇ ಅಲೆಯ ಕಾಟ?**
ಫ್ರಾನ್ಸ್, ಸ್ಪೇನ್, ಯುಕೆ, ನೇಪಾಳ, ಜರ್ಮನಿ, ರಷ್ಯಾ, ಇಟಲಿ

## 17 ಜಿಲ್ಲೆಗಳಲ್ಲಿ ಶೇ.90 ಚೇತರಿಕೆ

**ಬೆಂಗಳೂರು:** ರಾಜ್ಯದಲ್ಲಿ ಸೋಂಕಿತರ ಗುಣಮುಖ ಪ್ರಮಾಣ ನಿರಂತರ ಹೆಚ್ಚಳವಾಗುತ್ತಿದ್ದು ಸದ್ಯ 17 ಜಿಲ್ಲೆಗಳಲ್ಲಿ ಶೇ.90 ಹೆಚ್ಚು ಮಂದಿ ಸೋಂಕಿತರು ಗುಣಮುಖರಾಗಿದ್ದಾರೆ. ಒಂದೆಡೆ ಕೊರೊನಾ ಸೋಂಕು ಹೊಸ ಪ್ರಕರಣಗಳು ಇಳಿಕೆ ಹಾದಿ ಹಿಡಿದಿದ್ದು ಇನ್ನೊಂದೆಡೆ ಗುಣಮುಖ ಸಂಖ್ಯೆ ಹೆಚ್ಚಳವಾಗುತ್ತಿದೆ. ಸದ್ಯ ರಾಜ್ಯದ ಒಟ್ಟಾರೆ ಗುಣಮುಖರ ದರ ಶೇ.85 ರಷ್ಟಿದೆ. ಅಂದರೆ, ಈವರೆಗೂ ರಾಜ್ಯದಲ್ಲಿ ಸೋಂಕಿಗೊಳಗಾದ 100 ಮಂದಿ ಪೈಕಿ ಈಗಾಗಲೇ 85 ಮಂದಿ ಗುಣಮುಖರಾಗಿದ್ದಾರೆ. ಅದರಲ್ಲೂ 17 ಜಿಲ್ಲೆಗಳಲ್ಲಿ ಶೇ.90ಕ್ಕೂ ಹೆಚ್ಚು ಸೋಂಕಿತರು ಗುಣಮುಖರಾಗಿದ್ದಾರೆ.

## ಸೋಂಕಿನಿಂದ ಬಾಲಕಿಗೆ ದೃಷ್ಟಿ ಮಂದ

**ಕೊ**ರೊನಾ ಸೋಂಕಿನಿಂದ ಮೆದುಳಿನ ನರ ಮಂಡಲಕ್ಕೆ ಹಾನಿಯಾಗಿ 11 ವರ್ಷದ ಬಾಲಕಿಯೊಬ್ಬಳಿಗೆ ದೃಷ್ಟಿ ಮಂದವಾಗಿದ್ದು, ನವದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ(ಏಮ್ಸ್)ಯಲ್ಲಿ ಮೊದಲ ಬಾರಿಗೆ ಇಂಥ ಪ್ರಕರಣ ದೃಢಪಟ್ಟಿದೆ. ಅಪಸ್ಮಾರ, ಸೋಂಕು ದೃಢಪಟ್ಟ ಮಕ್ಕಳಲ್ಲಿ ಮೆದುಳಿನ ಉರಿಯೂತ, ಕವಾಸಾಕಿ ಮಾದರಿಯ ಕಾಯಿಲೆಗಳು ಕಂಡು ಬರುತ್ತವೆ. ಮಕ್ಕಳ ನರ ವಿಜ್ಞಾನ ವಿಭಾಗದ ವೈದ್ಯರು ಈ ಬಗ್ಗೆ ಮಾತನಾಡಿ ಬಾಲಕಿಯ ಆರೋಗ್ಯ ಸ್ಥಿತಿ ಬಗ್ಗೆ ಶೀಘ್ರವೇ ವರದಿ ಸಿದ್ಧಪಡಿಸಲಾಗುತ್ತದೆ. ಕೊರೊನಾದಿಂದಾಗಿಯೇ ಬಾಲಕಿಯ ಮೆದುಳಿನ ನರವ್ಯೂಹಕ್ಕೆ ಹಾನಿಯಾಗಿದೆ. ಏಮ್ಸ್ ನವದೆಹಲಿಯ ಮಕ್ಕಳ ವಿಭಾಗದಲ್ಲಿ ದೃಢಪಟ್ಟ ಮೊದಲ ಪ್ರಕರಣ ಇದಾಗಿದೆ ಎಂದು ವೈದ್ಯರು ಹೇಳಿದ್ದಾರೆ. ನರಗಳಿಗೆ ಮೈಲಿನ್ (myelin) ಎಂಬ ಹೊದಿಕೆ ಇದೆ. ಅವುಗಳು ಮೆದುಳಿನಿಂದ ದೇಹದ ಇತರ ಭಾಗಗಳಿಗೆ ಸಂದೇಶ ರವಾನಿಸುವಲ್ಲಿ ನೆರವಾಗುತ್ತವೆ. ಅದಕ್ಕೆ ತೊಂದರೆಯಾದರೆ ದೃಷ್ಟಿ ಮಂದ, ಸ್ನಾಯುಗಳ ಚಲನೆ ಸೇರಿದಂತೆ ಹಲವು ದೈಹಿಕ ಸಮಸ್ಯೆಗಳಿಗೆ ಕಾರಣವಾಗುತ್ತದೆ ಎಂದು ಏಮ್ಸ್ ವೈದ್ಯರು ತಿಳಿಸಿದ್ದಾರೆ.